ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

4

ಇಲಾಖೆ / ವಿಷಯ : DEPARTMENT / SUBJECT: ಕೊರೊನಾ-10

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE : 6/7/2020

● ಸಂಪುಟ 9 ● ಸಂಚಿಕೆ 222 4

# ವಿಶ್ವದ ಅತಿದೊಡ್ಡ ಕೋವಿಡ್ ಕೇಂದ್ರ

## ಬೆಂಗಳೂರಿನಲ್ಲಿ ಇಂದು ನೂತನ ಆಸ್ಪತ್ರೆ ಉದ್ಘಾಟನೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು 6-7-2020

ರಾಜ್ಯ ರಾಜಧಾನಿಯಲ್ಲಿ ಪ್ರತಿದಿನ ಸಾವಿರಾರು ಕರೊನಾ ಪ್ರಕರಣಗಳು ಪತ್ತೆಯಾಗುತ್ತಿರುವ ಸಂದರ್ಭದಲ್ಲೇ, ಸೋಂಕಿತರಿಗೆ ಚಿಕಿತ್ಸೆ ನೀಡಲು 10,100 ಹಾಸಿಗೆ ಹೊಂದಿರುವ ವಿಶ್ವದ ಅತಿದೊಡ್ಡ ಕೋವಿಡ್ ಆರೈಕೆ ಕೇಂದ್ರಕ್ಕೆ ಸೋಮವಾರ ಚಾಲನೆ ಸಿಗಲಿದೆ. ಬೆಂಗಳೂರಿನ ಅಂತಾರಾಷ್ಟ್ರೀಯ ವಸ್ತು (ಬಿಐಇಸಿ) ಪ್ರದರ್ಶನ ಕೇಂದ್ರದಲ್ಲಿ ಇದನ್ನು ಆರಂಭಿಸಲಾಗುತ್ತಿದೆ.

**» 10,100 ಹಾಸಿಗೆಗಳು, ರೋಗ ಲಕ್ಷಣಗಳು ಇಲ್ಲದವರಿಗೆ ಚಿಕಿತ್ಸೆ**

ಸೋಂಕು ನಿಯಂತ್ರಣ ಮಾಡುವಲ್ಲಿ ಮಹಾನಗರಗಳಾದ ಮುಂಬೈ, ಚೆನ್ನೈ, ದೆಹಲಿ ಹಾಗೂ ಕೋಲ್ಕತ್ತಾ ನಲುಗಿ ಹೋಗಿವೆ. ದೊಡ್ಡ ಆಸ್ಪತ್ರೆಗಳನ್ನು, ಕಾಲೇಜುಗಳನ್ನು . ಬಳಸಿಕೊಂಡಿವೆ. ಬೆಂಗಳೂರಿನಲ್ಲಿ ಕಳೆದ 10 ದಿನಗಳಿಂದ ಸೋಂಕಿತರ ಸಂಖ್ಯೆಯಲ್ಲಿ ತೀವ್ರ ಹೆಚ್ಚಳವಾಗುತ್ತಿದ್ದು, ಚಿಕಿತ್ಸೆ ನೀಡಲು ಹಾಸಿಗೆ ಕೊರತೆ ಎದುರಾಗಿದೆ. ಯಾರೊಬ್ಬರೂ ಚಿಕಿತ್ಸೆಯಿಂದ ವಂಚಿತರಾಗದಂತೆ ಕ್ರಮವಹಿಸಿರುವ ಬಿಬಿಎಂಪಿ, 10,100 ಹಾಸಿಗೆಗಳನ್ನು ಹೊಂದಿರುವ ಅತಿ ದೊಡ್ಡ ಕೋವಿಡ್-19 ಆರೈಕೆ ಕೇಂದ್ರವನ್ನು ಸಿದ್ಧಗೊಳಿಸಿದೆ.

### ಏನೆಲ್ಲ ಸೌಲಭ್ಯ?

- 10 ಜನರಿಗೊಂದು ಶೌಚಗೃಹ ಮತ್ತು ಸ್ನಾನಗೃಹ, ಎಲ್ಲರಿಗೂ ಮನರಂಜನೆ ಒದಗಿಸಲು ವಿಶಾಲವಾದ ಪರದೆ ಟಿ.ವಿ.
- ಪ್ರತಿ ಹಾಸಿಗೆಯಿಂದ ಮತ್ತೊಂದು ಹಾಸಿಗೆಗೆ 3 ಅಡಿಗೂ ಹೆಚ್ಚು ಅಂತರ, ಪ್ರತಿ ಬೆಡ್‌ಗೆ ಫ್ಯಾನ್, ಮೊಬೈಲ್ ಚಾರ್ಜಿಂಗ್ ಪಾಯಿಂಟ್, ಟೇಬಲ್ ವ್ಯವಸ್ಥೆ.
- ಕೇಂದ್ರದಲ್ಲಿ ಐದು ಸಭಾಂಗಣಗಳಿದ್ದು ತಲಾ 2 ಸಾವಿರ ಹಾಸಿಗೆಗಳಿರಲಿವೆ, 40 ರಿಂದ 42 ಹಾಸಿಗೆಗಳ ತಲಾ ಒಂದು ಪ್ರತ್ಯೇಕ ಕ್ಯಾಬಿನ್‌ಗಳ ನಿರ್ಮಾಣ.

### ದೆಹಲಿಯಲ್ಲೂ ಬೃಹತ್ ಆಸ್ಪತ್ರೆ

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕರೊನಾ ಸೋಂಕು ಜನರನ್ನು ಕಂಗೆಡಿಸಿರುವ ಬೆನ್ನಲ್ಲೇ 10 ಸಾವಿರ ಹಾಸಿಗೆಯ ಕೋವಿಡ್ ಆಸ್ಪತ್ರೆ ಭಾನುವಾರ ಲೋಕಾರ್ಪಣೆಯಾಗಿದೆ. ಇಂಡೊ-ಟಿಬೆಟಿಯನ್ ಬಾರ್ಡರ್ ಪೊಲೀಸ್ (ಐಟಿಬಿಪಿ) ಈ ಕೇಂದ್ರದ ನಿರ್ವಹಣೆ ಮಾಡಲಿದೆ. ಆಕ್ಸಿಜನ್ ಸಿಲಿಂಡರ್, ವೆಂಟಿಲೇಟರ್, ಐಸಿಯು ವ್ಯವಸ್ಥೆ ಇಲ್ಲಿದೆ. ಕೇಂದ್ರ ಹಾಗೂ ದೆಹಲಿ ಸರ್ಕಾರದ ಸಹಯೋಗದಲ್ಲಿ ಈ ಆಸ್ಪತ್ರೆ ಆರಂಭಿಸಲಾಗಿದೆ. ಸಾವಿರಕ್ಕೂ ಅಧಿಕ ವೈದ್ಯರು, ನರ್ಸ್, ಸಹಾಯಕರನ್ನು ನಿಯೋಜನೆ ಮಾಡಲಾಗಿದೆ.



ಬೆಂಗಳೂರಿನಲ್ಲಿ ನಿರ್ಮಾಣವಾಗಿರುವ ಕರೊನಾ ಕೇಂದ್ರ.

### ರೋಗ ಲಕ್ಷಣವಿಲ್ಲದವರಿಗೆ ಚಿಕಿತ್ಸೆ

ಕರೊನಾ ರೋಗ ಲಕ್ಷಣಗಳಿರದ ಸೋಂಕಿತರು ಹಾಗೂ ಗಂಭೀರ ಸಮಸ್ಯೆಗಳಿರದ ಸೋಂಕಿತರನ್ನು ಇಲ್ಲಿಗೆ ರವಾನಿಸಿ ಚಿಕಿತ್ಸೆ ನೀಡಲಾಗುತ್ತದೆ. ಗುಣಮಟ್ಟದ ಪೌಷ್ಟಿಕಾಂಶ ಆಹಾರ, ಔಷಧ ನೀಡಲಾಗುತ್ತದೆ. ಆರೈಕೆ ಕೇಂದ್ರಗಳಲ್ಲಿ ಚಿಕಿತ್ಸೆ ನೀಡಲು ವೈದ್ಯರು ಹಾಗೂ ನರ್ಸ್ ಸೇರಿ ಇತರೆ ಸಿಬ್ಬಂದಿ ನಿಯೋಜಿಸಲಾಗುತ್ತಿದೆ. ಇವರು ಒಂದು ವಾರಗಳ ಕಾಲ ಇಲ್ಲಿಯೇ ಉಳಿಯಬೇಕಿದ್ದು, ನಂತರ ಬೇರೆ ಸಿಬ್ಬಂದಿಯನ್ನು ಅಲ್ಲಿಗೆ ನಿಯೋಜಿಸಲಾಗುತ್ತದೆ. ತುರ್ತು ಸೇವೆಗಾಗಿ ಕೆಲವು ಆಮ್ಲಜನಕಯುಕ್ತ ಹಾಸಿಗೆಗಳನ್ನು ನಿರ್ಮಿಸಲಾಗುತ್ತಿದೆ.